# ನೀನೆ ಕರ್ತನು ಅಕರ್ತರು ಸಿರಿ ಅಜಭವೇಂದ್ರಾದ್ಯಮರರು

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 144.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 660.
3. **Ref.:** Samagra Dasa Sahity, Samputa 4, published by Kannada & Culture Dept, Govt of Karnataka, Bengaluru, page No. 12.
4. **Note:** Lyrics given here are as per Ref. 1. The wordings in Ref. 2 are same with few differences, which are not considered here.
5. **Note:** Singer has followed the wordings in Ref. 1.
6. **Note:** Lyrics given are as per Ref. 1. This is checked, corrected and approved by Dr. Vyasanakere Prabhanjanachar.

ನೀನೆ ಕರ್ತನು ಅಕರ್ತರು ಸಿರಿ ಅಜ ಭವೇಂದ್ರಾದ್ಯಮರರು

ನೀನೆ ಸ್ವತಂತ್ರ ಅಸ್ವತಂತ್ರರವರು

ನೀನೆ ಸಾರಾತ್ಮಕನಾಗಿ ಸ್ವೀಕರಿಸುವವ

ಜ್ಞಾನ ನಿನ್ನಧೀನ ಕರ್ಮ ನಿನ್ನಧೀನ

ಅನಾದಿ ಕಾಲದಿ ಇರುವ ಜೀವರಿಗೆ

ನೀನೆ ಸುಖವನೀವ ನೀನೆ ದುಃಖವನೀವ

ಅನಾದಿಗಳು ಜೀವ ಕರ್ಮ ಜ್ಞಾನ

ನಿನ್ನಧೀನವಯ್ಯ ಅನಾದಿ ಕರ್ಮ ನೀನೆ ಪುರಂದ ವಿಠಲ

ನೀನೆ ಸಲಹೋ ನಿನ್ನಡಿ ಪೊಂದಿದವರ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ನೀನೆ ಕರ್ತನು : -** ಶ್ರೀ ಹರಿಯೊಬ್ಬನಿಗೆ ಕರ್ತೃತ್ವ ಶಕ್ತಿ ಇದೆ.

**ಅಕರ್ತೃರು** ಸಿರಿ **ಅಜ ಭಾವೇಂದ್ರಾದ್ಯಮರರು : -** ಲಕ್ಷ್ಮಿ, ಬ್ರಹ್ಮ, ರುದ್ರಾ, ಇಂದ್ರಾದಿಗಳಿಗೆ ಕರ್ತೃತ್ವವಿಲ್ಲ

**ನೀನೆ ಸ್ವತಂತ್ರ ಅಸ್ವತಂತ್ರರವರು : -**

ಸ್ವತಂತ್ರ ಮಸ್ವತಂತ್ರಂ ಚ ದ್ವಿವಿಧಂ ತತ್ವ ವಿಷ್ಯತೇ

ಸ್ವಾತಂತ್ರೋ ಭಗವಾನ್ ವಿಷ್ಣುಹು ನಿರ್ದೋಷಾಖಿಲ ಸದ್ಗುಣಹ

**ನೀನೆ ಸಾರಾತ್ಮಕನಾಗಿ ಸ್ವೀಕರಿಸುವವ : -** ಶ್ರೀ ಹರಿ ಎಲ್ಲದರ ಸಾರವನ್ನು ತಾನೇ ಸ್ವೀಕರಿಸುತ್ತಾನೆಂಬುದನ್ನು ಶ್ರೀ ಮಧ್ವಾಚಾರ್ಯರು ವಿವರಿಸಿದ್ದಾರೆ. (ರಮಾ, ಬ್ರಹ್ಮಾದಿಗಳ ಆಲೋಚನೆಗೂ ನಿಲುಕದ ಅನಂತ ರಸಗಳನ್ನು ಶ್ರೀ ಹರಿ ಸ್ವೀಕರಿಸುತ್ತಾನೆ)

**Classification:** Ugabhoga
**Ankita:** purandara vittala
**Location:** NA
**Category:** Devataa Stuti
**Sub-Category:** brahma, Lakshmi, indra, swatantra, jnana, karma, jiva, sukha, dukha, Vishnu,
**Pravachana:** NA
**Explanation:** NA